# ಆಹಾ ಸುದ್ದಿ!

★ ಸಸಿತೋಟ




ಶಿಶುಗಳಿಗೂ ಡರ್ಬಿ ರೇಸ್. ಬ್ರಿಟನ್ನಿನಲ್ಲಿ ವರ್ಷವೂ ತುಂಬದ ಶಿಶುಗಳಿಗೆ ಅಂಬೆಗಾಲಿಕ್ಕುವ ಸ್ಪರ್ಧೆಯನ್ನು ಇತ್ತೀಚೆಗೆ ನಡೆಸಲಾಯಿತು. ಮುಂದೆ ಓದು, ಉದ್ಯೋಗ, ಬದುಕು ಎಂಬ ದೊಡ್ಡ ದೊಡ್ಡ ರೇಸ್‌ಗಳಿಗೆ ಈಗಿನಿಂದಲೇ ಅನುಭವ ಇರಲಿ ಎಂದಿರಬಹುದು.



ದಕ್ಷಿಣ ಕೊರಿಯಾದ ಈ ಅಜ್ಜಿ ಪಾರ್ಕ್ ಮ್ಯಾಕ್ ರೇ ಯೂಟ್ಯೂಬ್‌ನಲ್ಲಿ ಭಾರಿ ಪ್ರಸಿದ್ಧಿ. ಹಾಡು, ನೃತ್ಯ, ಪಾಕಶಾಸ್ತ್ರದಲ್ಲಿ ಪ್ರವೀಣೆಯಾಗಿರುವ 70ರ ಹರೆಯದ ಈಕೆ ಮೇಕಪ್ ಮಾಡಿಕೊಳ್ಳುವುದರಲ್ಲಿ, ಮಾಡುವುದರಲ್ಲಿ ಕೂಡಾ ಎತ್ತಿದ ಕೈ ಅಂತೆ. ವಯಸ್ಸಿಗೆ ರಿವರ್ಸ್ ಗೇರ್ ಹಾಕುವ ಕಲೆಯನ್ನು ಈಕೆಯಿಂದ ಕಲಿಯಬಹುದು.

ಉತ್ತರಪ್ರದೇಶದಲ್ಲಿ ಸರ್ಕಾರಿ ಉದ್ಯೋಗಿಯಾಗಿರುವ ವಧು ದೇಶದಲ್ಲಿ ಆರ್ಥಿಕ ಪರಿಸ್ಥಿತಿ ಕುಸಿತಕ್ಕೆ ಮೋದಿಯವರೇ ಕಾರಣ ಎಂದು ವಾದಿಸಿದ್ದಕ್ಕೆ, ಮೋದಿ ಬೆಂಬಲಿಗ ಉದ್ಯಮಿ ವರನಿಗೆ ಸಿಟ್ಟು ಬಂದು ಜಗಳ ಶುರುವಾಗಿ ಕೊನೆಗೆ ಮದುವೆಯನ್ನೇ ರದ್ದು ಮಾಡಿದರಂತೆ. ವರನ ಮನೆಯಲ್ಲಿ ಶೌಚಾಲಯವಿಲ್ಲ ಎಂದು ಮದುವೆಯಾಗಲು ನಿರಾಕರಿಸುವ ವಧುವಿನ ಸಮಸ್ಯೆಯನ್ನೇನೋ ನಿವಾರಿಸಬಹುದು. ಆದರೆ ಪ್ರಧಾನಿ ನರೇಂದ್ರ ಮೋದಿ ಬೆಂಬಲಿಸುವ ವಿಷಯದ ಮೇಲೆ ವಿವಾಹವನ್ನೇ ರದ್ದುಪಡಿಸಿದರೆ..

ಟೆಕ್ಸಾಸ್ ಕಂಪೆನಿಯೊಂದರ ಕಾಫಿ ಪುಡಿಯಿಂದ ತಯಾರಿಸಿದ ಕಾಫಿ ಕುಡಿದ ಪುರುಷರು ವಯಾಗ್ರ ಸೇವಿಸಿದಂತೆ ಆಡುತ್ತಿದ್ದು, ಈಗ ಅಲ್ಲಿಯ ಆಹಾರ ಮತ್ತು ಔಷಧ ನಿಯಂತ್ರಣ ಇಲಾಖೆ ಅದನ್ನು ನಿಷೇಧಿಸಿದೆಯಂತೆ. ಆದರೂ ಪುಡಿ ಕಳ್ಳತನದಲ್ಲಿ ಮಾರಾಟವಾಗುತ್ತಿದೆಯಂತೆ. ರಾತ್ರಿ ಮಲಗುವ ಮುನ್ನ ಹೆಂಡತಿಗೆ ಕಾಫಿ ಮಾಡುವ ಕೆಲಸ.



ಆತ ಯಾವ ಗಳಿಗೆಯಲ್ಲಿ ಎಟಿಎಂ ಗೆ ಕಾರ್ಡ್ ತೂರಿಸಿದನೋ, ಕೈಗೆ ಬಂದಿದ್ದು ನೋಟುಗಳ ಕಂತೆಯ ಬದಲು ಹಾವಿನ ಬಾಲ. ಇದು ನಡೆದಿದ್ದು ಮೆಕ್ಸಿಕೋದಲ್ಲಿ. ಅದೃಷ್ಟ ಕೈ ಕೊಟ್ಟರೆ ಹಣವೂ ಹಾವಾಗಬಹುದು.



ಬರಿಗೈ, ಬರಿಮೈನಲ್ಲಿ ಕುಸ್ತಿ ಆಡುವುದು ಸಾಮಾನ್ಯ. ಆದರೆ ಬರಿಮೈಗೆ ಎಣ್ಣೆ ಸವರಿಕೊಂಡು ಕುಸ್ತಿಯಾಡುವುದು ಟರ್ಕಿಯಲ್ಲಿ ಭಾರಿ ಜನಪ್ರಿಯವಂತೆ. ಗದ್ದ ಮೇಲೆ ಎಣ್ಣೆ ಕುಡಿಯುವುದರ ಜೊತೆಗೆ ಮೈಗೂ ಎಣ್ಣೆ ಕುಡಿಸುವುದು ಎಂದರೆ ಇದೇ ಇರಬಹುದು.